**ಅಸಲು ದಾವಾ ನಂ:119/2013**
**ಡಿ.ಡಬ್ಲ್ಯೂ: 01**

**ದಿನಾಂಕಃ 19-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಟಿ.ಟಿ., ವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಗಡೆಪಾಲಯ್ಯನಿಗೆ ಒಟ್ಟು 5 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಎಂದರೆ ಸರಿ. ಒಂದನೇಯವರು ನಿಂಗಮ್ಮನ ಮಗ ಗೋವಿಂದರೆಡ್ಡಿ, ಎರಡನೇಯವರು ತಿಮ್ಮಾರೆಡ್ಡಿ, ಮೂರನೇಯವರು ಲಕ್ಷ್ಮಪ್ಪರೆಡ್ಡಿ, ನಾಲ್ಕನೇಯವರು ರಾಮಚಂದ್ರರೆಡ್ಡಿ, ಐದನೇಯವರು ವಾಸುದೇವರೆಡ್ಡಿ ಅಂದರೆ ನಾನು. ನನ್ನ ತಾಯಿ ತಿಮ್ಮಕ್ಕ ನಾನು ಚಿಕ್ಕವನಿದ್ದಾಗಲೇ ಮೃತರಾಗಿರುತ್ತಾರೆ. ಗೋವಿಂದರೆಡ್ಡಿಯವರ ತಾಯಿ ನಿಂಗಮ್ಮರವರು ಮೃತರಾಗಿರುತ್ತಾರೆ. ಮೃತರಾಗಿ ಎಷ್ಟು ವರ್ಷ ಆಯಿತು ಅಂತ ಹೇಳಲು ಸಾಧ್ಯವಿಲ್ಲ. ನನ್ನ ತಂದೆ ಗಡೆಪಾಲಯ್ಯನವರು ಯಾವ ಸಾಲಿನಲ್ಲಿ ತೀರಿಕೊಂಡರು ಅಂತ ಹೇಳಲು ಸಾಧ್ಯವಿಲ್ಲ. ನನ್ನ ತಂದೆ ಜೀವಂತ ಇರುವಾಗ ನಮ್ಮ ಅಣ್ಣ ತಮ್ಮಂದಿರ ಮದುವೆಯಾಗಿರುತ್ತದೆ ಎಂದರೆ ಸಾಕ್ಷಿಯು ಕೇವಲ ತಿಮ್ಮಾರೆಡ್ಡಿಯವರ ಮದುವೆ ಮಾತ್ರ ಆಗಿರುತ್ತದೆ ಎಂದು ನುಡಿಯುತ್ತಾರೆ. ಗೋವಿಂದರೆಡ್ಡಿಯವರ ಮದುವೆ ತಿಮ್ಮಾರೆಡ್ಡಿಯವರ ಮದುವೆಗೂ ಮುಂಚೆ ಆಗಿರಲಿಲ್ಲ ಎಂದರೆ ಸರಿ. ಗೋವಿಂದರೆಡ್ಡಿಯವರು ನಮ್ಮ ಕುಟುಂಬದ ಹಿರಿಯ ಮಗ ಎಂದರೆ ಸಾಕ್ಷಿಯು ತಿಮ್ಮಾರೆಡ್ಡಿಯವರು ಹಿರಿಯ ಮಗ ಎಂದು ಉತ್ತರಿಸುತ್ತಾರೆ. ನಮ್ಮ ಕುಟುಂಬಕ್ಕೆ ಗೋವಿಂದರೆಡ್ಡಿಯವರೇ ಹಿರಿಯ ಮಗ ಎಂದರೆ ಸರಿಯಲ್ಲ.

ತಿಮ್ಮಾರೆಡ್ಡಿಯವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ತಿಮ್ಮಾರೆಡ್ಡಿಗೆ ಯಾವ ಸಾಲಿನಲ್ಲಿ ಮದುವೆಯಾಗಿರುತ್ತದೆ ಅಂತ ಹೇಳಲು ಸಾಧ್ಯವಿಲ್ಲ. ತಿಮ್ಮಾರೆಡ್ಡಿ ಹೆಂಡತಿಯ ತವರು ಮನೆ ತಿಪ್ಪಾರೆಡ್ಡಿ ಹಳ್ಳಿ ಆಗಿರುತ್ತದೆ. ತಿಮ್ಮಾರೆಡ್ಡಿ ಹೆಂಡತಿಯ ತವರು ಮನೆಯವರು ಆರ್ಥಿಕವಾಗಿ ಪ್ರಬಲರಾಗಿದ್ದಾರೆ ಎಂದರೆ ಸರಿಯಲ್ಲ. ತಿಮ್ಮಾರೆಡ್ಡಿ ಹೆಂಡತಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ.

ನಮ್ಮ ತಂದೆ ಜೀವಂತ ಇರುವಾಗ ಎರಡನೇ ಹೆಂಡತಿ ಮತ್ತು ಅವರ ಮಕ್ಕಳೊಂದಿಗೆ ಒಟ್ಟು ಕುಟುಂಬದಲ್ಲಿ ವಾಸವಿದ್ದರು. ನನ್ನ ತಂದೆಯ ಮರಣಾನಂತರ ಒಟ್ಟು ಕುಟುಂಬದ ಯಜಮಾನಿಕೆಯನ್ನು 1 ನೇ ಪ್ರತಿವಾದಿಯ ಗಂಡ ಲಕ್ಷ್ಮಪ್ಪರೆಡ್ಡಿ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ತಿಮ್ಮಾರೆಡ್ಡಿಯವರು ಹೊಂದಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ

ಗಂಡ ಲಕ್ಕ್ಮಪ್ಪರೆಡ್ಡಿಯವರು ಮನೆಯ ಯಜಮಾನಿಕೆಯನ್ನು ಹೊಂದಿದ್ದರು ತಿಮ್ಮಾರೆಡ್ಡಿ ಎಂದು



ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಾರೆಡ್ಡಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಲಕ್ಕ್ಮಪ್ಪರೆಡ್ಡಿಯವರು ವಿದ್ಯಾವಂತರಾಗಿದ್ದರು ಎಂದರೆ ಸರಿ. ಲಕ್ಷ್ಮಪ್ಪರೆಡ್ಡಿಯವರು ಸಿ.ಡಿ.ಸಿ.ಸಿ ಬ್ಯಾಂಕ್ ಚಿತ್ರದುರ್ಗದಲ್ಲಿ ಕೆಲಸದಲ್ಲಿದ್ದರು ಎಂದರೆ ಸರಿ. ಲಕ್ಷ್ಮಪ್ಪರೆಡ್ಡಿಯವರು ವಿದ್ಯಾವಂತರಾಗಿದ್ದು ಹಾಗೂ ನೌಕರಿಯಲ್ಲಿದ್ದ ಕಾರಣ ಮನೆಯ ಯಜಮಾನಿಕೆಯನ್ನು ಅವರೇ ಹೊಂದಿದ್ದರು ಎಂದರೆ ಸರಿಯಲ್ಲ. ನಾನು, ರಾಮಚಂದ್ರರೆಡ್ಡಿ ಹಾಗೂ ಲಕ್ಷ್ಮಪ್ಪರೆಡ್ಡಿಯವರು ಪ್ರೀತಿ ವಿಶ್ವಾಸದಿಂದ ಇದ್ದು ಗೋವಿಂದರೆಡ್ಡಿ ಹಾಗೂ ತಿಮ್ಮಾರೆಡ್ಡಿಯವರಿಗೆ ಸೇರುತ್ತಿರಲಿಲ್ಲ ಎಂದರೆ ಸಾಕ್ಷಿಯು ನಾವು ಎಲ್ಲರೊಂದಿಗೆ ಪ್ರೀತಿ ವಿಶ್ವಾಸದಿಂದ ಇದ್ದೇವು ಎಂದು ನುಡಿಯುತ್ತಾರೆ.

ದಾವಾ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿಯರು ಇಲ್ಲಿಯವರೆಗೂ ಜಂಟಿ ಸ್ವಾಧೀನಾನುಭವ ಹೊಂದಿರುತ್ತೇವೆ ಎಂದರೆ ಸಾಕ್ಷಿಯು 1969 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ದಿಃ21-05-1969 ರಂದು ಬಾಯಿಮಾತಿನ ಮೂಲಕ ನನ್ನ ತಂದೆ ಹಾಗೂ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿರುತ್ತೇವೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಪಂಚಣ್ಣ, ಸಿದ್ದಯ್ಯ, ಹನುಮಪ್ಪ ರವರ ಸಮಕ್ಷಮದಲ್ಲಿ ಬಾಯಿಮಾತಿನ ಮೂಲಕ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿಯವರುಗಳು ಈಗ ಮೃತರಾಗಿರುತ್ತಾರೆ. ಅವರ ಹೆಂಡತಿಯ ಮಕ್ಕಳು ಜೀವಂತ ಇರುತ್ತಾರೆಯೇ ಎಂದರೆ ಸಾಕ್ಷಿಯು ಹೆಂಡತಿಯರು ಜೀವಂತ ಇಲ್ಲ, ಮಕ್ಕಳು ಜೀವಂತ ಇರುತ್ತಾರೆ ಎಂದು ನುಡಿಯುತ್ತಾರೆ. ಕೊರ್ಲಗುಂಟೆ ಗ್ರಾಮದ ಸರ್ವೇ ನಂ.56/1 ಕ್ಷೇತ್ರ 3 ಎಕರೆ 6 ಗುಂಟೆ ಜಮೀನಿನಲ್ಲಿ ಪೂರ್ವಕ್ಕೆ 10 ಗುಂಟೆ ಜಮೀನನ್ನು ನಮ್ಮ ತಂದೆಯ ಜೀವನಾಂಶಕ್ಕೆ ಬಿಟ್ಟಿರುದ್ದೇವು. ಪಶ್ಚಿಮ ದಿಕ್ಕಿಗೆ ಇರುವ 29 ಗುಂಟೆ ಜಮೀನು ಮತ್ತು ರೂ.2000/- ಸಾಲವನ್ನು, ¼ ಭಾಗ ಮನೆ ತಿಮ್ಮಾರೆಡ್ಡಿಯವರ ಭಾಗಕ್ಕೆ, ಲಕ್ಷ್ಮಪ್ಪರೆಡ್ಡಿಯವರಿಗೆ 29 ಗುಂಟೆ ಜಮೀನು ಮತ್ತು ರೂ.1200/- ಸಾಲವನ್ನು, ¼ ಭಾಗ ಮನೆ ಭಾಗಕ್ಕೆ ಬಂದಿರುತ್ತದೆ, ರಾಮಚಂದ್ರರೆಡ್ಡಿಯವರಿಗೆ 29 ಗುಂಟೆ ಜಮೀನು ಮತ್ತು ರೂ.1300/- ಸಾಲವನ್ನು, ¼ ಭಾಗ ಮನೆ ಭಾಗಕ್ಕೆ ಬಂದಿರುತ್ತದೆ, ನನಗೆ 29 ಗುಂಟೆ ಜಮೀನು ಮತ್ತು ರೂ.1281/- ಸಾಲವನ್ನು, ¼ ಭಾಗ ಮನೆ ಭಾಗಕ್ಕೆ ಬಂದಿರುತ್ತದೆ. ಪುಟ್ಲರಹಳ್ಳಿ ಗ್ರಾಮದ ಸರ್ವೇ ನಂ.39 ಕ್ಷೇತ್ರ 36 ಎಕರೆ 10 ಗುಂಟೆ ಪೂರ್ವ ದಿಕ್ಕಿಗೆ ನನಗೆ ಮದುವೆಗಾಗಿ 18 ಎಕರೆ 5 ಗುಂಟೆ ಜಮೀನನ್ನು ಎಲ್ಲರು ಒಪ್ಪಿ ಕೊಟ್ಟಿರುತ್ತಾರೆ.

ಉಳಿದ 18 ಎಕರೆ 5 ಗುಂಟೆ ಜಮೀನನ್ನು ತಂಗಿ ಲಕ್ಷ್ಮಮ್ಮನಿಗೆ ಮದುವೆಗಾಗಿ ಕೊಟ್ಟಿರುತ್ತಾರೆ.



ಸದರಿ ವಿಷಯದ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಿಮ್ಮಾರೆಡ್ಡಿಯವರಿಗೆ ರೂ.2000/- ಸಾಲವನ್ನು ಯಾವ ಸಾಲಿನಿಂದ ಮತ್ತು ಯಾರ ಕಡೆಯಿಂದ ಸಾಲವನ್ನು ಹೊರೆಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಚಿಕ್ಕವನಿದ್ದ ಕಾರಣ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅಕ್ಲನಣ್ಣ ಸಾಲ ಎಂದು ನುಡಿಯುತ್ತಾರೆ. ಲಕ್ಷ್ಮಪ್ಪರೆಡ್ಡಿಯವರಿಗೆ ರೂ.1200/- ಗಳ ಮಹದೇವಪುರದ ಗುರಪ್ಪರವರ ಸಾಲವನ್ನು ಹೊರೆಸಿರುತ್ತೇವೆ. ರಾಮಚಂದ್ರರೆಡ್ಡಿಯವರಿಗೆ ರೂ.1300/- ಗಳ ಕರಿಕೆರೆ ಭೀಮಪ್ಪ ಮತ್ತು ವೆಂಕಟೇಶ ಶೆಟ್ಟಿಯವರ ಸಾಲವನ್ನು ಹೊರೆಸಿರುತ್ತೇವೆ. ನನಗೆ ರೂ.1281/- ಗಳ ಡಿಸಿಸಿ ಬ್ಯಾಂಕ್ ಪರಶುರಾಂಪುರ ಶಾಖೆ ಹಾಗೂ ಪಿ.ಎಲ್.ಡಿ ಬ್ಯಾಂಕ್ ಚಳ್ಳಕೆರೆ ಶಾಖೆ ಸಾಲವನ್ನು ಹೊರೆಸಿರುತ್ತಾರೆ.

ಸದರಿ ಸಾಲಗಳನ್ನು ನಮ್ಮ ತಂದೆಯವರು ವಾದಿಯ ತಂದೆ ತಿಮ್ಮಾರೆಡ್ಡಿಯವರ ಮದುವೆಗಾಗಿ ಮಾಡಿರುತ್ತಾರೆ. ಸದರಿ ವಿಷಯಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಂದೆ ತಿಮ್ಮಾರೆಡ್ಡಿಯವರ ಮದುವೆಗಾಗಿ ಮಾಡಿದ ಖರ್ಚಿನ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ಪಾಲಿಗೆ ಬಂದ ಡಿ.ಸಿ.ಸಿ ಬ್ಯಾಂಕ್ ಪರಶುರಾಂಪುರ ಶಾಖೆ ಹಾಗೂ ಪಿ.ಎಲ್.ಡಿ ಬ್ಯಾಂಕ್ ಚಳ್ಳಕೆರೆ ಶಾಖೆ ಸಾಲವನ್ನು ಎಷ್ಟನೇ ಸಾಲಿನಲ್ಲಿ ಪಾವತಿಸಿರುತ್ತೇನೆ ಎಂದರೆ ಸಾಕ್ಷಿಯು ರಾಮಕೃಷ್ಣ ಹೆಗ್ಗಡೆಯವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಹೆಸರಿನಲ್ಲಿದ್ದ ಸಾಲಕ್ಕೆ, ನಿಡಿಃ54 ರಲ್ಲಿರುವ ರಶೀದಿಯಂತೆ ರೂ.262/- ಪಾವತಿಸಿರುತ್ತೇನೆ ಎಂದರೆ ಸರಿ. ನಿಡಿಃ53 ರಲ್ಲಿರುವ ರಶೀದಿಯಂತೆ ರೂ.675/- ಪಾವತಿಸಿರುತ್ತೇನೆ ಎಂದರೆ ಸರಿ. ಸದರಿ ಸಾಲಗಳನ್ನು ನಮ್ಮ ತಂದೆಯವರು ಹೊರೆಸಿರುತ್ತಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಅವುಗಳನ್ನು ಅವರ ಜೀವಿತ ಕಾಲದಲ್ಲಿಯೇ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಲಕ್ಷ್ಮಪ್ಪರೆಡ್ಡಿಯವರು ಬ್ಯಾಂಕ್ ನ ನೌಕರರಾಗಿದ್ದ ಕಾರಣ ನಾನು, ಲಕ್ಷ್ಮಪ್ಪರೆಡ್ಡಿ ಹಾಗೂ ಬ್ಯಾಂಕಿನ ಅಧಿಕಾರಿಗಳು ಸೇರಿ ನಿಡಿಃ53 ಮತ್ತು ನಿಪಿಃ54 ನ್ನು ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.